
೭ ಪದ್ಯ

# ಕುರುಡರು ಕಂಡ ಆನೆ

-ಟಿ. ಎಸ್. ನಾಗರಾಜ ಶೆಟ್ಟಿ



ಕುರುಬನಹಳ್ಳಿಗೆ ಕುರುಡರು ಐವರು
ಆನೆಯ ನೋಡಲು ಮನ ಮಾಡಿ
ಬಂದರು ಜೊತೆಯಲಿ ನಿಂದರು ಬಳಿಯಲಿ
ಆನೆಯ ತಿಳಿದ ಮಜ ನೋಡಿ ॥



ಒಂದನೆಯವನು ಚೆಂದದಿ ಕಾಲನು
ಮುಟ್ಟುತ ಮುದದಲಿ ಹುಡುಕಿದನು
ಆನೆಯ ಬಿಂಬವು ಕಂಬದ ಹಾಗೆಯೆ
ಎಂದೇ ತಿಳಿಯುತ ದುಡುಕಿದನು ॥

ಎರಡನೆಯವನು ಸೊಂಡಿಲ ತಡಕುತ
ಎರಡೂ ಕೈಯಲ್ಲಿ ಹುಡುಕಿದನು
ಆನೆಯ ಆಕೃತಿ ಹಾವಿನ ಹಾಗೆಯೆ
ಎಂದೇ ಭಾವಿಸಿ ಮಿಡುಕಿದನು ॥

ಮೂರನೆಯವನು ಹೊಟ್ಟೆಯ ಮುಟ್ಟುತ
ಎರಡೂ ಕೈಯಲ್ಲಿ ಅಪ್ಪಿದನು
ಆನೆಯ ಇರುವಿಕೆ ಗೋಡೆಯ ಹಾಗೆಯೆ
ಎಂದೇ ಮನದಲಿ ಒಪ್ಪಿದನು ॥

ನಾಲ್ಕನೆಯವನು ಕಿವಿಯನು ಸವರುತ
ಅಂಗೈಯನ್ನು ಆಡಿಸಿದ
ಆನೆಯ ಸ್ಥಿತಿಯು ಕೇರುವ ಮೊರವೇ
ತಿಳಿದೆನು ಎನ್ನುತ ತಾ ಕುಣಿದ ॥

ಕೊನೆಯವನಂತೂ ಬಾಲವನೆಳೆಯುತ
ತುದಿಯನು ಹಿಡಿದು ಜಗ್ಗಿದನು
ಆನೆಯ ರೂಪವು ಹಗ್ಗದ ಹಾಗೆಯೆ
ಎಂದೇ ತಿಳಿಯುತ ಹಿಗ್ಗಿದನು ॥



# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ಕುರುಡ = ಕಣ್ಣುಕಾಣಿಸದವ (Blind)
2. ಬಳಿ = ಹತ್ತಿರ (Near)
3. ಮುದ = ಸಂತೋಷ (Happy)
4. ತಡಕು = ಮುಟ್ಟುತ (Touch)
5. ಆಕೃತಿ = ರೂಪ (Image)
6. ಮಿಡುಕು = ಚಿಂತಿಸು (Worry)
7. ಅಪ್ಪು = ತಬ್ಬು (Hug or Embrace)
8. ಅಂಗೈ = ಕೈಯ ಅಡಿಭಾಗ (Palm)
9. ಎಳೆ = ಜಗ್ಗು (Pull)

## II. ಪದ್ಯ ಭಾಗಗಳನ್ನು ಪೂರ್ಣಗೊಳಿಸಿ.



1. ಕುರುಬನ ..................................................................

..............................................................................

..............................................................................

.................................................................. ನೋಡಿ!

2. ನಾಲ್ಕನೆಯವನು ..........................................................

..............................................................................

..............................................................................

..............................................................................

3. ಎರಡನೆಯವನು ..........................................................

..............................................................................

..............................................................................

.......................................................... ಮಿಡುಕಿದನು!

**III. ಕೆಳಗಿನ ವಾಕ್ಯಗಳಲ್ಲಿ ಯಾವುದು ಸರಿ/ತಪ್ಪು ಎಂದು ಗುರುತಿಸಿ, ಬರೆಯಿರಿ.**

1. ಒಂದನೆಯವನು ಆನೆಯ ಸೊಂಡಿಲನ್ನು ಹುಡುಕಿದನು. ☐
2. ಎರಡನೆಯವನು ಹೊಟ್ಟೆಯನ್ನು ಮುಟ್ಟಿದನು. ☐
3. ನಾಲ್ಕನೆಯವನು ಕಾಲನ್ನು ಮುಟ್ಟಿದನು. ☐
4. ಕೊನೆಯವನು ಬಾಲವನ್ನು ಎಳೆದನು. ☐

**IV. ಈ ಪದ್ಯವನ್ನು ಅಭಿನಯದೊಂದಿಗೆ ಕಲಿಯಿರಿ ಮತ್ತು ಕಂಠಪಾಠ ಮಾಡಿರಿ.**

**V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. ಕುರುಡರು ಕಂಡ ಆನೆ ಪದ್ಯವನ್ನು ಬರೆದ ಕವಿಯ ಹೆಸರೇನು?

______________________________

2. ಕುರುಡರು ಯಾವ ಊರಿನವರು?

______________________________

3. ಎರಡನೆಯವನು ಆನೆಯ ಬಗ್ಗೆ ಏನು ಯೋಚಿಸಿದನು?

______________________________

4. ಆನೆಯ ಬಿಂಬವು ಯಾವುದರ ಹಾಗೆ ಇದೆ?

______________________________

5. ಮೂರನೆಯವನು ಆನೆಯ ಯಾವ ಭಾಗವನ್ನು ಮುಟ್ಟಿದನು?

______________________________

6. ಕಿವಿಯು ಯಾವ ವಸ್ತುವನ್ನು ಹೋಲುತ್ತಿತ್ತು?

______________________________

7. ನಾಲ್ಕನೆಯವನು ಕಿವಿಯನು ಸವರುತ ಯಾವುದರ ಹಾಗೆ ಇದೆ ಎಂದು ಕುಣಿದನು?

______________________________

## VI. ಹೊಂದಿಸಿ ಬರೆಯಿರಿ.

| ಎ | ಬಿ | |
|---|---|---|
| 1. ಐವರು | ಅ. ಮೊರ | |
| 2. ಸೊಂಡಿಲು | ಆ. ಹಗ್ಗ | |
| 3. ಕಿವಿ | ಇ. ಹಾವು | |
| 4. ಬಾಲ | ಈ. ಕಂಬ | |
| 5. ಕಾಲು | ಉ. ಕುರುಡರು | |



## ಚಟುವಟಿಕೆ

1. ಮಕ್ಕಳು ಪದ್ಯವನ್ನು ನಾಟಕ ರೂಪದಲ್ಲಿ ಅಭಿನಯಿಸಲು ಶಿಕ್ಷಕರು ನಿರ್ದೇಶಿಸಬೇಕು.
2. ಆನೆಯ ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚಿರಿ.

**ಕುರುಡರ ಬಗ್ಗೆ ಅನುಕಂಪ ಬೇಡ ಪ್ರೀತಿ ಇರಲಿ**